ಭಾನುವಾರ ಬಂದೇಬಿಟ್ಟಿತು. ಮೀಟಿಂಗು ನಡೆಯಿತು. ಹೋಗಿಬರೋಣವೆಂದು ಸಾಕಷ್ಟು ಜನ ಸೇರಿದರು. ಅವರಲ್ಲಿ ಹೆಚ್ಚು ಮುಸಲ್ಮಾರು ತುಂಬಿದ್ದರು. ಆದರೆ ಎಂಎಲ್‌ಎ ಕಿಟ್ಟಪ್ಪನಿಗೆ ಮನಸ್ಸಿಗೆ ಮಾತ್ರ ಸಮಾಧಾನವಾಗಲಿಲ್ಲ.

ಅದಕ್ಕೇ ಮಾರನೇದಿನ ಅಬ್ದುಲ್ಲಾನನ್ನು ಕರೆಸಿ, "ನಿನಗೇನು ಹೇಳಿದ್ದೆನೋ... ಮೀಟಿಂಗ್‌ನಲ್ಲಿ ಜಾಸ್ತಿ ಮುಸ್ಲಿಂ ಮಹಿಳೆಯರು ಕಾಣಿಸಬೇಕೆಂದು ಹೇಳಿದ್ದೆನಾ? ಇಲ್ಲವಾ?"

"ಹೇಳಿದ್ದಿರಿ ಸಾರೂ."

"ಮತ್ತೆ ಎಲ್ಲೋ ಅವರು?"

"ಯಾಕೆ ಇರ್ಲಿಲ್ಲ ಸಾರೂ. ಇನ್ನೂರು ಜನಕ್ಕೆ ಕಡಿಮೆಯಿಲ್ಲದಷ್ಟು ಮುಸ್ಲಿಂ ಮಹಿಳೆಯರು ಬಂದಿದ್ದರು. ಬೇಕಾದರೆ ನಾನು ಇಲ್ಲೇ ಇರ್ತೀನಿ. ನಿಮ್ಮ ಮನುಷ್ಯರನ್ನು ಯಾರನ್ನಾದರೂ ಸರಿ... ನಮ್ದು ವಾರ್ಡ್‌ಗೆ ಕಳಿಸಿ ವಿಚಾರಿಸಿಕೊಂಡು ಬರಲು ಹೇಳಿ... ಆಗ ಗೊತ್ತಾಗ್ತದೆ" ಎಂದ.

ಅವನು ಅಷ್ಟು ಖಡಾಖಂಡಿತವಾಗಿ ಹೇಳುವ ವೇಳೆಗೆ ಎಂಎಲ್‌ಎ ಸ್ವಲ್ಪ ಮೆತ್ತಗಾದ.

"ಮೀಟಿಂಗಿಗೆ ಮುಸಲ್ಮಾನರು ಜಾಸ್ತಿ ಬಂದದ್ದೇನೋ ನಿಜ ಕಣೋ. ಮಹಿಳೆಯರು ಕೂಡ ಜಾಸ್ತಿ ಜನ ಕಾಣಿಸಿದರು. ಆದರೆ ಮುಸ್ಲಿಂ ಮಹಿಳೆಯರ ಕುರಿತು ನಾನು ಕೇಳುತ್ತಿದ್ದೇನೆ. ನೀನು ಹೇಳಿದಹಾಗೆ ಆ ಹೆಂಗಸರು ಬಂದಿದ್ದೇ ಆದರೆ ಮೀಟಿಂಗ್ ತುಂಬಾ ಬುರ್ಖಾಗಳೇ ಕಾಣಿಸಬೇಕಿತ್ತಲ್ಲವಾ. ಅಲ್ಲಲ್ಲಿ ಎಲ್ಲೋ ಎರಡು ಮೂರು ಬುರ್ಖಾಗಳು ಮಾತ್ರ ಕಾಣಿಸಿದವು."

"ಓಹೋ ಅದಾ ನೀವು ಕೇಳುತ್ತಿರುವುದು." ಎಂದು ಭಯದಿಂದ ಕೇಳಿದ ಅಬ್ದುಲ್ಲಾ.

"ನಾನು ಮನೆ ಮನೆಗೆ ಹೋಗಿ ಹೆಂಗಸರಿಗೆ ಬುರ್ಖಾ ಹಾಕಿಕೊಂಡು ಬನ್ನಿ ಎಂದು ಹೇಳಿದೆ ಸಾರೂ. ಆದರೆ ಏನು ಮಾಡಬೇಕು... ಯಾರ ಮನೆಯಲ್ಲೂ ಬೇಕಾದಷ್ಟು ಬುರ್ಖಾಗಳು ಇಲ್ಲ. ಆರು ಹೆಂಗಸರಿರುವ ಮನೆಯಲ್ಲಿ ಒಂದೇ ಒಂದು ಬುರ್ಖಾ ಇದೆಯೆಂದರೆ ನಂಬಲೇಬೇಕು. ಅದು ಕೂಡ ಅಲ್ಲಲ್ಲಿ ಹರಿದು ಹೋಗಿದೆ. ಅದು ಹೇಗೆ ಹಾಕಿಕೊಳ್ಳುತ್ತಾರೆ ಹೇಳಿ. ಒಂದು ಬುರ್ಖಾದಲ್ಲಿ ಎಲ್ಲರೂ ಒಮ್ಮೆಗೇ ಹೊರಗೆ ಬರಲು ಸಾಧ್ಯವಾಗುತ್ತದಾ? ನಮ್ಮ ಮನೆಗಳಲ್ಲಿ ಬಹಳ ಹೆಂಗಸರಿಗೆ ಬುರ್ಖಾಗಳಿಲ್ಲ ಸಾರೂ. ಒಂದು ನೂರೈವತ್ತು ಇನ್ನೂರು ಕೊಟ್ಟು ಬುರ್ಖಾಗಳನ್ನು ಕೂಡ ಕೊಳ್ಳಲಾಗದಷ್ಟು ಹೀನವಾದ ಸ್ಥಿತಿ ನಮ್ಮದು ಸಾರೂ. ಏನಾದರೂ ಅಗತ್ಯ ಬಿದ್ದರೆ ಆಗಿಂದಾಗ್ಗೆ ಪಕ್ಕದ ಮನೆಯಲ್ಲಿಯೋ, ಎದುರು ಮನೆಯಲ್ಲೋ ಕೇಳಿ ಬುರ್ಖಾ ಹಾಕಿಕೊಂಡು ಬರುತ್ತಾರೆ. ಆ ಎದುರು ಮನೆ, ಆ ಪಕ್ಕದ ಮನೆಯವರನ್ನು ಕೂಡ ನಾವು ಮೀಟಿಂಗಿಗೆ ಕರೆದೆವು. ಇನ್ನು ಎಲ್ಲಿ ಸಿಗುತ್ತವೆ ಇವರಿಗೆ ಬುರ್ಖಾಗಳು. ಅಲ್ಲಿಗೂ ಸಾರೂ... ನನ್ನ ಮಾತಿಗೆ ಬೆಲೆ ಕೊಟ್ಟು ಹೆಂಗಸರು ಬುರ್ಖಾ ಹಾಕಿಕೊಂಡು ಬಂದಿದ್ದರು. ಬಹಳ ಜನ ಸ್ವಲ್ಪ ಹರಿದಿದ್ದ ಹಳೆಯ ಬುರ್ಖಾಗಳನ್ನು ಆಗಿಂದಾಗ್ಗೆ ಹೊಲಿದುಕೊಂಡು ಬಂದಿದ್ದರು. ಹೊಲಿಯಲು ಕೂಡ ಆಗದಿದ್ದವರು... ತಮ್ಮ ಮಾನವನ್ನು ಲೆಕ್ಕಿಸದೆ ಅಬ್ದುಲ್ಲಾ ಅಣ್ಣ ಹೇಳಿದ್ದಾನಲ್ಲವಾ... ಎಂದು ತಲೆಯ ಮೇಲೆ ಬಟ್ಟೆ ಹೊದ್ದುಕೊಂಡು ಮೀಟಿಂಗಿಗೆ ಬಂದಿದ್ದರು ಸಾರೂ..." ಎಂದ.

ಕಿಟ್ಟಪ್ಪನಿಗೆ ಬಾಯಿಂದ ಮಾತು ಹೊರಳಲಿಲ್ಲ.

ಸ್ವಲ್ಪಹೊತ್ತು ಯೋಚಿಸಿ ಒಂದು ಮಾತೆಂದ.

"ಮೊನ್ನೆ ಹೈದರಾಬಾದಿನಲ್ಲಿ ಯಾರೋ ಲೇಖಕಿ ಅಸೆಂಬ್ಲಿಯ ಬಳಿ ಕಾಣಿಸಿದಳು. 'ಮುಸ್ಲಿಂ ಸ್ತ್ರೀಯರು ಬುರ್ಖಾಗಳಿಂದ ಹೊರಬಿದ್ದಾಗಲೇ ಅವರಿಗೆ ಸ್ವೇಚ್ಛೆ' ಎಂದು ಮಾತನಾಡಿದಳು. ಬುರ್ಖಾಗಳನ್ನು ಕೊಂಡುಕೊಳ್ಳುವ ಸಾಮರ್ಥ್ಯ ಇಲ್ಲದವರು ಇನ್ನು ಬುರ್ಖಾಗಳಿಂದ ಹೊರಬರುವುದೆಂದರೇನು? ಎಲ್ಲ ವಿಚಿತ್ರವಾಗಿದೆ" ಎಂದ.